## ವಿನಯಾ ಒಕ್ಕುಂದ

ಸರ್ಕಾರಿ ಕಾಲೇಜಿನ ಅಧ್ಯಾಪಕಿ ವಿನಯಾ ಧಾರವಾಡದಲ್ಲಿ ನೆಲೆಸಿದ್ದಾರೆ. ಸಮಕಾಲೀನ ವಿದ್ಯಮಾನಗಳನ್ನು ಸ್ತ್ರೀ ನೋಟದ ಮೂಲಕ ಸೂಕ್ಷ್ಮವಾಗಿ ಚಿತ್ರಿಸುವ ಅವರು, ‘ಬಾಯಾರಿಕೆ’, ‘ನೂರು ಗೋರಿಯ ದೀಪ’, ‘ಹಸಬಿ’ ಎಂಬ ಕವಿತೆಯ ಸಂಗ್ರಹಗಳನ್ನು, ‘ಊರ ಒಳಗಣ ಬಯಲು’, ‘ಉರಿ’ ಎಂಬ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ.



‘ಯಪ್ಪಾ, ಇವತ್ತ ನೀ ಏನೂ ಕೊಡಬ್ಯಾಡ. ನಾವ ಕೊಟ್ಟಿದ್ದನ್ನ ಒಯ್ಯೂದಷ್ಟ ನಿನ್ನ ಕೆಲಸ’ ಅಂದಳು. ‘ಯವ್ವಾ, ಹಂಗ ಮಾಡಬ್ಯಾಡವಾ. ನಾ ಇನ್ನೊಮ್ಮೆ ಬರಬೇಕೋ ಬ್ಯಾಡೊ?’ ಅಂದೆ. ‘ಯಪ್ಪಾ, ಹಂಗ್ಯಾಕ ಅಂತೀಯೋ? ಹಂಗಿದ್ರ ಅರ್ಧಾ ರೊಕ್ಕಾ ಕೊಡು, ಸಾಕು’ ಅಂದಳು. ನೆಲದ ಮೇಲೆ ಕುಳಿತು, ಹಣ್ಣು ಮಾರಿ, ಹೊಟ್ಟೆ ಹೊರೆಯುತ್ತಿದ್ದ ಆ ಬಡ ಬೂಬೂ ಮತ್ತು ರಜಿಯಾ ನಮ್ಮ ನಾಡಿನ ಯಾವ ಸಾಹಿತಿಗಳಿಗಿಂತಲೂ ಪ್ರೊಫೆಸರ್‌ಗಳಿಗಿಂತಲೂ ಕಡಿಮೆಯವರು ಎಂದು ನನಗೆ ಅನಿಸಲಿಲ್ಲ.

◆ **ಇಳಿ ಸಂಜೆಯ ತಂಪಿನಲ್ಲಿ ಕೂತಾಗ, ಮನುಷ್ಯ ಬದುಕಿನ ಧನ್ಯತೆಯ ಶೋಧನೆಯ ಹಾದಿ ಹೇಗೆ ಕಾಣ್ತದೆ ಸಾರ್? ಮನುಷ್ಯ ಒಂಟಿ ಮತ್ತು ಆ ಒಂಟಿತನವೇ ಅವನ ಶಕ್ತಿ ಅಂತೆಲ್ಲೋ ಓದಿದ್ದೆ. ಹೇಳಿ ಸಾರ್, ನಾವು ನಿಮ್ಮ ಹಿಂದೆಯೇ ಇದ್ದೇವೆ ಅಲ್ಲವೇ?**

ಈಗ 81ರ ವಯಸ್ಸು. ಕೆಲ ಕಾಲದಿಂದ ಕಾಲು, ಬೆರಳು ಸಂದು ಹಿಡಿಯುತ್ತವೆ. ಕಳೆದ 7–8 ವರ್ಷದಿಂದ ಒಂದು ಕಣ್ಣು ಕೈ ಕೊಡುತ್ತ ಬಂದಿದೆ. ಈಚೆ ಎಂಟು ತಿಂಗಳಿಂದ ರಕ್ತದೊತ್ತಡ, ಮಧುಮೇಹ. ಮೊದಲಿನಿಂದಲೂ ಊಟ ಕಡಿಮೆ, ಯಾವ ಚಟವೂ ಇಲ್ಲ. ವಾಕಿಂಗ್ ಮಾತ್ರ ಸ್ವಲ್ಪ ಕಡಿಮೆ. ಹೊರಗಿನ ಕಾರ್ಯಕ್ರಮಗಳಿಗೆ, ಭಾಷಣಗಳಿಗೆ ಹೋಗುವುದು ಬೇಡವೆನಿಸುತ್ತಿದೆ. ಮಕ್ಕಳು ತಮ್ಮ ಬದುಕು ಕಟ್ಟಿಕೊಂಡಿದ್ದಾರೆ. ಮನೆಯಲ್ಲಿ ನಾವಿಬ್ಬರೇ. ನಾನು ಕಂಪ್ಯೂಟರ್ ಕಲಿತುಕೊಂಡಿದ್ದೇನೆ. ದಿನಕ್ಕೆ 7–8 ತಾಸು ನಿಧಾನ ಬರವಣಿಗೆ. ಅದರಲ್ಲಿ ಸಿಗುವ ಸುಖ ಬೇರೆ ಎಲ್ಲಿಯೂ ಇಲ್ಲ.

ತಲೆ ತುಂಬ ರಾಶಿ ರಾಶಿ ನೆನಪಿನ ಕಣಜ. ಅವನ್ನು ಹೊಂದಿಸಬೇಕು, ಮರೆಯಾಗದಂತೆ, ಕೆಡದಂತೆ, ನುಸಿ ಹಿಡಿಯದಂತೆ ಕಟ್ಟಿಟ್ಟು ಕಾಪಾಡಿಕೊಳ್ಳಬೇಕು. ಈಗ ಅಂಥ ಕೆಲಸ ಮಾಡುತ್ತಿದ್ದೇನೆ. ಆತ್ಮಕಥೆಯ ಎರಡನೆಯ ಭಾಗ ಬರೆಯುತ್ತಿದ್ದೇನೆ. ವಯಸ್ಸಿನ ಈ ಸಂಜೆ ಹೊತ್ತಿನಲ್ಲಿ ಹೆಚ್ಚು ತಿನ್ನಲು, ದಕ್ಕಿಸಿಕೊಳ್ಳಲು ಆಗುವುದಿಲ್ಲ. ಹಾಗೆಯೇ ಹೆಚ್ಚು ಆಸೆಯ ಕೋಟೆ ಕಟ್ಟಿಕೊಳ್ಳುವುದೂ ಬೇಡ ಅನಿಸಿದೆ. ಸಾಕು. ●